ಅವರಿಬ್ಬರೂ ಹೊಸ ರೀತಿಯ ಸ್ಕೂಲೊಂದನ್ನು ನಡೆಸುವ ಬಗ್ಗೆ ಯೋಚಿಸುತ್ತಿದ್ದಂತಿತ್ತು; ರಮೇಶ್ ರೆಡ್ಡಿ ಕಳೆದೆರಡು ವರ್ಷದಿಂದ ಈ ಬಗ್ಗೆ ತಮ್ಮೊಡನೆ ಆಗಾಗ ಮಾತಾಡುತ್ತಾ ಹೇಳುತ್ತಿದ್ದ ಐಡಿಯಾಗಳು ಡಾಕ್ಟರಿಗೆ ನೆನಪಾಗತೊಡಗಿದವು. ಮೂವತ್ತರ ಆಸುಪಾಸಿನಲ್ಲಿರುವ, ಇಷ್ಟೊಂದು ಎನರ್ಜಿಯಿರುವ, ಈ ಇಬ್ಬರನ್ನೂ ಅವರು ಶುರು ಮಾಡಲಿರುವ ಸ್ಕೂಲು ನಿಜಕ್ಕೂ ಪೊರೆಯಲಿ ಎನ್ನಿಸಿತು. ದಿನನಿತ್ಯ 'ದೊಡ್ಡವರ' ಜೊತೆ, 'ಗಣ್ಯಾತಿಗಣ್ಯರ' ಜೊತೆ ಎಡತಾಕಿ ತಮ್ಮ ಜೀವಕೋಶಗಳನ್ನೇ ಕಳೆದುಕೊಂಡಂತಿರುವ ಈ ಇಬ್ಬರೂ ಇನ್ನು ಮುಂದೆ ಮಕ್ಕಳ ಜೊತೆ ಬೆರೆತು ಕಲಿಸುವ ಸ್ಕೂಲ್ ಮಾಡಲು ನಿಜಕ್ಕೂ ಬದ್ಧರಾಗಿದ್ದರೆ... ತುಮಕೂರಿನ ಹೊರವಲಯದಲ್ಲಿ ನರ್ಸಿಂಗ್ ಹೋಮ್ ಕಟ್ಟಿಸಲು ತಾವು ಮೀಸಲಾಗಿಟ್ಟಿರುವ ಎರಡು ಎಕರೆ ಜಮೀನಿನ ಒಂದು ಭಾಗದಲ್ಲೇ ಆ ಸ್ಕೂಲು ಶುರು ಮಾಡಲು ಹೇಳಬಹುದು ಎಂದುಕೊಂಡರು.

ಇಷ್ಟಾಗಿಯೂ... ಬೆಳಗೂ ಬೈಗೂ ಮೂಡುವ ಮೂಡುಗಳಿಗೆ ತಕ್ಕಂತೆ ತಮ್ಮ ತೀರ್ಮಾನಗಳನ್ನು ಬದಲಿಸುವ ಈ ಟ್ವೆಂಟಿ ಫಸ್ಟ್ ಸೆಂಚುರಿ ಜೋಡಿ ಎಷ್ಟು ದಿನ, ಎಷ್ಟು ವಾರ ಈ ಉದ್ದೇಶದ ಬಗ್ಗೆ ಗಟ್ಟಿಯಾಗಿರುತ್ತದೋ ಕಾದು ನೋಡೋಣ ಎಂದುಕೊಂಡ ಡಾಕ್ಟರು ಅವರತ್ತ ನೋಡುತ್ತಿರುವಂತೆಯೇ, ಅವರಿಬ್ಬರೂ ಯಾವುದೋ ತುರ್ತು ಕೆಲಸವಿರುವವರಂತೆ ಛಕ್ಕನೆ ಮೇಲೆದ್ದರು. ತಮಗೂ ಹೇಳದೆ ತರಾತುರಿಯಲ್ಲಿ ಹೊರಹೊರಟ ಅವರಿಬ್ಬರ ಉತ್ಸಾಹದ ನಡಿಗೆಯಲ್ಲಿ ಕ್ಷಿಪ್ರ ಕಾಮಾತುರವೇ ಮಿಂಚಿದಂತಾಗಿ ಡಾಕ್ಟರು ತುಂಟ ನಗೆ ನಗುತ್ತಾ ಹುಬ್ಬೇರಿಸಿದರು! ನರ್ಸಿಂಗ್ ಹೋಮಿನ ಎದುರು ನಿಲ್ಲಿಸಿದ್ದ ಹೋಂಡಾ ಸ್ಕೂಟರಿನ ಮುಂದಿನ ಸೀಟಿನ ಮೇಲೆ ಮುಖಕ್ಕೆ ಮಾಸ್ಕ್ ಹಾಕಿಕೊಂಡ ಮಲ್ಲಿಕಾ ಛಕ್ಕನೆ ಕೂತ ಗತ್ತನ್ನೂ, ಅವಳ ಹಿಂದೆ ಮೂಗು, ಬಾಯಿಗೆ ಕರ್ಚೀಫ್ ಸುತ್ತಿಕೊಂಡು, ಅವಳ ನಿಷ್ಠ ಅನುಯಾಯಿಯಂತೆ ರಮೇಶ್ ರೆಡ್ಡಿ ಕೂತ ವಿಧೇಯ ಭಂಗಿಯನ್ನೂ ನೋಡುತ್ತಾ, ಈಚಿನ ದಿನಗಳಲ್ಲಿ ನಿಜಕ್ಕೂ ಸುಂದರವಾದ ಕರ್ತವ್ಯವೊಂದನ್ನು ನಿಭಾಯಿಸಿದ ನೆಮ್ಮದಿಯಲ್ಲಿ ಡಾಕ್ಟರು ಮುಗುಳ್ನಕ್ಕರು.


## ನಟರಾಜ್ ಹುಳಿಯಾರ್

ಕವಿ, ಕತೆಗಾರ, ವಿಮರ್ಶಕ, ಅಂಕಣಕಾರ, ನಾಟಕಕಾರ. 'ಮತ್ತೊಬ್ಬ ಸರ್ವಾಧಿಕಾರಿ', 'ಮಾಯಾ ಕಿನ್ನರಿ', 'ಬಸವಲಿಂಗಪ್ಪನವರು ಮತ್ತು ಡೇವಿಡ್ ಸಾಹೇಬರು' (ಕಥಾಸಂಗ್ರಹಗಳು), 'ಗಾಳಿ ಬೆಳಕು' (ಅಂಕಣ), 'ಶೇಕ್‌ಸ್ಪಿಯರ್ ಮನೆಗೆ ಬಂದ', 'ಮುಂದಣ ಕಥನ' (ನಾಟಕಗಳು), 'ರೂಪಕಗಳ ಸಾವು' (ಕವಿತೆ), 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ' (ಸಂಶೋಧನೆ), 'ಇಂತಿ ನಮಸ್ಕಾರಗಳು' (ಸಾಂಸ್ಕೃತಿಕ ಕಥಾನಕ), 'ಕಾಮನ ಹುಣ್ಣಿಮೆ' (ಕಾದಂಬರಿ), 'ಪ್ರಜಾವಾಣಿ' ಅಂಕಣ ಬರಹಗಳ ಪುಸ್ತಕ 'ಕನ್ನಡಿ', 'ಶಾಂತವೇರಿ ಗೋಪಾಲಗೌಡ' (ಜೀವನ ಚರಿತ್ರೆ) ಅವರ ಕೆಲವು ಪುಸ್ತಕಗಳು. ಪಿ. ಲಂಕೇಶ್ ಅವರ ಆಯ್ದ ಬರಹಗಳ ಇಂಗ್ಲಿಷ್ ವಾಚಿಕೆ 'ಡಾರ್ಕ್ ಅರ್ತ್' ಇತ್ತೀಚೆಗೆ ಪ್ರಕಟವಾಗಿದೆ. ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಗಾಂಧೀ ಅಧ್ಯಯನ ಕೇಂದ್ರದ ನಿರ್ದೇಶಕರು.